**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಪ್ರಾಧಿಕಾರ**

ಸಂಖ್ಯೆ:ಸಚುಪ್ರಾ/ಮ.ಪಟ್ಟಿ/02/2016

3 ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. ಎ ಬ್ಲಾಕ್,
ಶಾಂತಿನಗರ, ಬೆಂಗಳೂರು-27
ದಿನಾಂಕ: 14.12.2015

## ಸುತ್ತೋಲೆ

ವಿಷಯ:- ಚುನಾವಣಾ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಗಳು ಪದಾವಧಿಯು ಮುಕ್ತಾಯವಾಗಲಿರುವ ಚುನಾವಣೆಗಳು ಸನ್ನಿಹಿತವಾಗಿರುವ ಎಲ್ಲಾ ಸಹಕಾರ ಸಂಘಗಳ/ಸಹಕಾರಿಗಳ ಕ್ರೋಡೀಕೃತ ಪಟ್ಟಿಯೊಂದಿಗೆ ಕೂಲಂಕುಶ ಪರಿಶೀಲನೆಯ ನಂತರ ಮತದಾರರ ಪಟ್ಟಿ ಸಲ್ಲಿಸುವ ಬಗ್ಗೆ.

ಉಲ್ಲೇಖ:- 1. ಸಹಕಾರ ಚುನಾವಣಾ ಆಯೋಗದ ಅಧಿಸೂಚನೆ ಸಂಖ್ಯೆ:ಸಚುಆ/ ಅ.ಸೂ-3/2013 ದಿನಾಂಕ:26.04.2013
2.ಸಹಕಾರ ಚುನಾವಣಾ ಆಯೋಗದ ಸುತ್ತೋಲೆ ಸಂಖ್ಯೆ:ಸಚುಆ/ ಚುನಾವಣೆ/ಮಾಹಿತಿ/54/2014 ದಿ:31.05.2014
3. ಸಹಕಾರ ಚುನಾವಣಾ ಪ್ರಾಧಿಕಾರದ ಸುತ್ತೋಲೆ ಸಂಖ್ಯೆ: ಸಚುಪ್ರಾ/ ಮ.ಪಟ್ಟಿ ಪರಿಷ್ಕರಣೆ/50/2015 ದಿನಾಂಕ: 12.06.2015

*****

2011ರ ಭಾರತದ ಸಂವಿಧಾನದ 97ನೇ ತಿದ್ದುಪಡಿಯಂತೆ ಕರ್ನಾಟಕದಲ್ಲಿ 2012ರಲ್ಲಿ ಸಹಕಾರ ಸಂಘಗಳ ಕಾಯ್ದೆಗೆ ತಿದ್ದುಪಡಿ ತಂದು ಸಹಕಾರ ಚುನಾವಣಾ ಆಯೋಗದ ರಚನೆಯಾದ ನಂತರ 2013 ರಿಂದ 2015ರ ವರೆಗಿನ ಆಡಳಿತ/ಮಂಡಲಿಯ/ಸದಸ್ಯರ/ಪದಾಧಿಕಾರಿಗಳ ಸಾಮಾನ್ಯ ಮತ್ತು ಖಾಲಿ ಬಿದ್ದ ರಿಕ್ತ ಸ್ಥಾನಗಳಿಗೆ ಚುನಾವಣೆಗಳನ್ನು ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ ಮತ್ತು 39ಎಎ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26 ಮತ್ತು 26ಎ ಅವಕಾಶದಂತೆ ಪ್ರಾಧಿಕಾರದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣದಂತೆ ನಡೆಸಲಾಗಿರುತ್ತದೆ. ಅದೇ ರೀತಿಯಲ್ಲಿ ಚುನಾವಣೆಗಳನ್ನು ನಡೆಸುವ ತತ್ಸಂಬಂಧಿತ ಮತದಾರರ ಪಟ್ಟಿಯನ್ನು ತಯಾರಿಸುವ ಕಾರ್ಯವನ್ನು ಪ್ರಾಧಿಕಾರದ ಆಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೊಳಪಟ್ಟು ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎಎ(2) ರಂತೆ ಹಾಗೂ ಕರ್ನಾಟಕ ಸೌಹಾರ್ದ ನಿಯಮಗಳು 2004 ನಿಯಮ 5ಬಿ ಅವಕಾಶದಂತೆ ನಿರ್ವಹಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮತದಾರರ ಪಟ್ಟಿಯನ್ನು ತಯಾರಿಸುವ ಕುರಿತು ಉಲ್ಲೇಖಿತ ದಿನಾಂಕಗಳಂದು ಅಧಿಸೂಚನೆ / ಸುತ್ತೋಲೆಗಳನ್ನು ಈಗಾಗಲೇ ಹೊರಡಿಸಲಾಗಿದೆ.

ಮತದಾರರ ಪಟ್ಟಿಯನ್ನು ತಯಾರಿಸುವ ಪ್ರಕ್ರಿಯೆಯಲ್ಲಿ ಗುರುತರವಾದ ಲೋಪದೋಷಗಳಾಗಿರುವ ಬಗ್ಗೆ ದೂರುಗಳು ರಾಜ್ಯಾದ್ಯಂತ ಸದಸ್ಯರುಗಳಿಂದ ಪ್ರಾಧಿಕಾರಕ್ಕೆ ಸಲ್ಲಿಕೆಯಾಗಿದ್ದ ಹಿನ್ನೆಲೆಯಲ್ಲಿ, ನಿಯಮಾನುಸಾರ ಸರಿಯಾದ ಮತದಾರರ ಪಟ್ಟಿಯನ್ನು ತಯಾರಿಸುವ ಬಗ್ಗೆ ಈಗಾಗಲೇ ಪ್ರಾಧಿಕಾರದಿಂದ ದಿನಾಂಕ 12.06.2015ರಂದು ಉಲ್ಲೇಖ (2)ರ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸದರಿ ಸುತ್ತೋಲೆಯಲ್ಲಿ ಮತದಾರರ ಪಟ್ಟಿಯನ್ನು ಕೇವಲ ಚುನಾವಣೆ ಪೂರ್ವದಲ್ಲಿ ತಯಾರಿಸುವುದಕ್ಕಿಂತ ಪ್ರತಿ ವರ್ಷ ಕಡ್ಡಾಯವಾಗಿ ಆಯಾ ವರ್ಷದ ಏಪ್ರಿಲ್-1 ರಿಂದ ಮುಂದಿನ ವರ್ಷದ ಮಾರ್ಚ್-31 ರವರೆಗೆ ಎಲ್ಲಾ ರೀತಿಯ ಸಹಕಾರ ಸಂಘಗಳ / ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ತಮ್ಮ ಸಂಘಗಳ ಸರಿಯಾದ ಮತದಾರರುಗಳ ಪರಿಷ್ಕೃತ ಪಟ್ಟಿಯನ್ನು ತಯಾರಿಸಲು ಈ ಮೂಲಕ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ. ಈ ಬಗ್ಗೆ ಎಲ್ಲಾ ರೀತಿಯ ಸಹಕಾರ ಸಂಘಗಳು/ ಸಹಕಾರಿಗಳು, ಆಯಾ ವಿಭಾಗಗಳ ರಾಜ್ಯಮಟ್ಟದ ಮಹಾಮಂಡಳಿಗಳು/ಜಿಲ್ಲಾ ಮಟ್ಟದ ಫೆಡರಲ್ ಸಂಘಗಳು ಮತ್ತು ಯೂನಿಯನ್‌ಗಳು/ ಜಿಲ್ಲಾ ಬ್ಯಾಂಕುಗಳು/ ಹಾಲು ಒಕ್ಕೂಟಗಳು ಇದರ

ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಈ ಬಗ್ಗೆ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಸಹಕಾರ ಸಂಘಗಳ /ಸಹಕಾರಿಗಳ ಸರಿಯಾದ ಮತದಾರರ ಪಟ್ಟಿಯನ್ನು ತಯಾರಿಸುವ ಬಗ್ಗೆ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಡುವ ಚುನಾವಣಾಧಿಕಾರಿಗಳಿಗೆ, ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ರಿಟರ್ನಿಂಗ್ ಆಫೀಸರ್‌ಗಳಿಗೆ ಈ ಬಗ್ಗೆ ತಮ್ಮ ಹಂತದಲ್ಲಿ ಆಯಾ ವರ್ಷದಲ್ಲಿ ಚುನಾವಣೆಗೆ ಬಾಕಿ ಇರುವ ಸಂಘಗಳ ಚುನಾವಣೆ ನಡೆಸಲು ಮತದಾರರ ಪಟ್ಟಿ ತಯಾರಿಸುವ ಕುರಿತಂತೆ ಈ ಸುತ್ತೋಲೆಯಲ್ಲಿ ನೀಡಲಾದ ಮಾರ್ಗದರ್ಶನಗಳಂತೆ ಸೂಕ್ತ ತರಬೇತಿ ನೀಡಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ನಿಯಮಗಳು 2004ರಂತೆ ಅನ್ವಯವಾಗಬಹುದಾದ ವಿವಿಧ ಪ್ರಕರಣಗಳ ಮತ್ತು ನಿಯಮಗಳ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

ಮತದಾರರ ಅರ್ಹತೆ ಮತ್ತು ಅನರ್ಹತೆ ಕುರಿತಂತೆ ನಿರ್ದರಿಸಲು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮಗಳು 1959ರ ಪ್ರಕರಣ 20(2) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 20(2) ಹಾಗೂ 55 ರೀತ್ಯಾ ಮತದಾರರ ಪಟ್ಟಿ ತಯಾರಿಸುವಾಗ ಸದಸ್ಯನ ಮಾಹಿತಿ ಹಾಗೂ ಷೇರು ವಿವರಗಳನ್ನು, ವಾರ್ಷಿಕ ಮಹಾಸಭೆಗೆ ಹಾಜರಾದ ಸದಸ್ಯರ ಹಾಜರಾತಿ ವಿವರಗಳನ್ನು ಹಾಗೂ ಸದಸ್ಯರು ಕನಿಷ್ಠ ವ್ಯವಹಾರ/ಸೌಲಭ್ಯಗಳನ್ನು ಪಡೆದಿರುವ ವಿವರಗಳನ್ನು ನಿಯಮಾನುಸಾರ ನಿರ್ದರಿಸಲು ಪುಸ್ತಕಗಳನ್ನು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕಡ್ಡಾಯವಾಗಿ ನಿರ್ವಹಿಸತಕ್ಕದ್ದಾಗಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಸಿ ರೀತ್ಯಾ ಸಹಕಾರ ಚುನಾವಣಾ ಪ್ರಾಧಿಕಾರದ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿರ್ದೇಶನಕ್ಕೆ ಒಳಪಟ್ಟು ಸಹಕಾರ ಸಂಘಗಳ/ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕನು ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಗಾಗಿ ಮತದಾರರ ಪಟ್ಟಿಯನ್ನು ಸಿದ್ದಪಡಿಸತ್ತಕದ್ದಾಗಿದೆ. ಮುಖ್ಯಕಾರ್ಯನಿರ್ವಾಹಕನಿಂದ ಈ ರೀತಿ ತಯಾರಿಸಲ್ಪಟ್ಟ ಪಟ್ಟಿಯನ್ನು ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಯು ಪರಿಶೀಲಿಸಿ ಅನುಮೋದಿಸಬೇಕಾಗಿರುತ್ತದೆ.

ಮತದಾರರ ಪಟ್ಟಿ ತಯಾರಿಕಾ ಪ್ರಕ್ರಿಯೆಯ ಪೂರ್ವದಲ್ಲಿ ಸಹಕಾರ ಸಂಘಗಳ ನಿಯಮ 1960, ನಿಯಮ 13ಡಿ(1) ರಂತೆ ಚುನಾವಣಾ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಯು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಹಕಾರ ಸಂಘಗಳ /ಸಹಕಾರಿಗಳ ಆಡಳಿತ ಮಂಡಲಿಗಳ ಪದಾವಧಿಯು ಮುಕ್ತಾಯವಾಗುವ ಕನಿಷ್ಟ 120 ದಿನಗಳ ಪೂರ್ವದಲ್ಲಿ ಚುನಾವಣೆಗಳು ಸನ್ನಿಹಿತವಾಗಿರುವ ಎಲ್ಲಾ ಸಹಕಾರ ಸಂಘಗಳ ಕ್ರೋಢೀಕೃತ ಪಟ್ಟಿಯನ್ನು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದಾಗಿದೆ.

ಎಲ್ಲಾ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ(4)ರ ರೀತ್ಯಾ ಚುನಾವಣಾ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ ಚುನಾವಣಾಧಿಕಾರಿಯು ಪ್ರಾಧಿಕಾರದ ನಿರ್ದೇಶನದಂತೆ ಸರಿಯಾದ ಮತದಾರರ ಪಟ್ಟಿಯನ್ನು ತಯಾರಿಸಿ ಅನುಮೋದಿಸಲು ಅನುವಾಗುವಂತೆ ಸಮರ್ಪಕ ಮಾಹಿತಿಯನ್ನು ಒದಗಿಸುವುದು ಆದ್ಯ ಕರ್ತವ್ಯವಾಗಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ(5)ರ ರೀತ್ಯಾ ಪ್ರತಿ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕನು ಸದಸ್ಯತ್ವ ರಿಜಿಸ್ಟರಿನಲ್ಲಿ ದಾಖಲಿಸಲಾದ ನಮೂದುಗಳ ಆಧಾರದ ಮೇಲೆ (ಅ) ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟುಗಳ ಕರಡು ಪಟ್ಟಿಯನ್ನು, (ಆ)ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗದಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡು ಪಟ್ಟಿಯನ್ನು, (ಇ) ಸುಸ್ತಿದಾರರ ಕರಡು ಪಟ್ಟಿಯನ್ನು

(ಈ) ಅನರ್ಹತೆಗೆ ಕಾರಣಗಳನ್ನು ಸದಸ್ಯವಾರು ತೋರಿಸಿ, ಸಾಮಾನ್ಯ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರದ, ಇತರ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟುಗಳ ಕರಡು ಪಟ್ಟಿಯನ್ನು ತಯಾರಿಸತಕ್ಕದ್ದಾಗಿದೆ. ಅದೇ ರೀತಿಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 5ಬಿ ರಂತೆ ಪ್ರತಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ಸದಸ್ಯತ್ವ ರಿಜಿಸ್ಟರಿನಲ್ಲಿ ದಾಖಲಿಸಲಾದ ನಮೂದುಗಳ ಆಧಾರದ ಮೇಲೆ ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳ ಸದಸ್ಯರ ಹಾಗೂ ಸದಸ್ಯ ಸಹಕಾರಿಗಳ ಮತ ನೀಡುವ ಹಕ್ಕುಳ್ಳ ಡೆಲಿಗೇಟುಗಳ ಕರಡು ಅರ್ಹತಾ ಪಟ್ಟಿಯನ್ನು, ಸಹಕಾರಿಯ ಸುಸ್ತಿದಾರರ ಕರಡು ಪಟ್ಟಿ ಹಾಗೂ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ/ಪ್ರತಿನಿಧಿ/ಡೆಲಿಗೇಟುಗಳ ಕರಡು ಪಟ್ಟಿಗಳನ್ನು ತಯಾರಿಸತಕ್ಕದ್ದಾಗಿದೆ.

ಅದೇ ರೀತಿಯಲ್ಲಿ ನಿಯಮ 13ಡಿ(5)(ಎ)ರಡಿ ಬಿಡಿ ವ್ಯಕ್ತಿಯ ಸದಸ್ಯನ ಸಂಬಂಧದಲ್ಲಿ, ಸದಸ್ಯನ ಅಥವಾ ಪ್ರತಿನಿಧಿಯ ಹೆಸರು, ಪ್ರವೇಶತ್ವದ ಸಂಖ್ಯೆ, ಹೆತ್ತವರ ಅಥವಾ ಪತಿಯ ಹೆಸರು ಹಾಗೂ ಅಂಥ ಸದಸ್ಯನ ಅಥವಾ ಪ್ರತಿನಿಧಿಯ ವಿಳಾಸ ಹಾಗೂ (ಬಿ) ಸದಸ್ಯ ಸಹಕಾರ ಸಂಘದ ಸಂಬಂಧದಲ್ಲಿ, ಪ್ರವೇಶತ್ವ ಸಂಖ್ಯೆ, ಸಹಕಾರ ಸಂಘದ ಹೆಸರು, ಸಂಘವನ್ನು ಪ್ರತಿನಿಧಿಸಲು ಪ್ರಸ್ತಾಪಿಸಿರುವ ಡೆಲಿಗೇಟಿನ ಹೆಸರು ಇರತಕ್ಕದ್ದು ಮತ್ತು ಸದರಿ ಪಟ್ಟಿಗಳನ್ನು ಸಂಬಂಧಪಟ್ಟ ಪುಸ್ತಕಗಳ, ದಾಖಲೆಗಳ ಮತ್ತು ದಸ್ತಾವೇಜುಗಳ ಸಹಿತ ಚುನಾವಣಾ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಯವರಿಗೆ ಚುನಾವಣಾ ದಿನಾಂಕದ ಪೂರ್ವದ ಕನಿಷ್ಟ ಅರವತ್ತು ದಿನಗಳ ಮುಂಚಿತವಾಗಿ ಒದಗಿಸತಕ್ಕದ್ದಾಗಿರುತ್ತದೆ.

ಸಹಕಾರ ಸಂಘಗಳ/ ಸಹಕಾರಿಗಳ ಸದಸ್ಯರುಗಳಿಂದ ಗೌರವ ಉಚ್ಚ ನ್ಯಾಯಾಲಯಗಳಲ್ಲಿ ಮತ್ತು ಇತರೆ ಯಾವುದೇ ನ್ಯಾಯಾಲಯಗಳಲ್ಲಿ ಅರ್ಜಿಗಳಲ್ಲಿ ಸಲ್ಲಿಸಿರುವ ಬಗ್ಗೆ ನ್ಯಾಯಾಲಯಗಳು ನೀಡಬಹುದಾದ ಆದೇಶಗಳನ್ನು/ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು ಮತದಾರರ ಪಟ್ಟಿಯನ್ನು ತಯಾರಿಸತಕ್ಕದ್ದು. ಅದೇ ರೀತಿಯಲ್ಲಿ, ಸರ್ಕಾರ/ ನಿಬಂಧಕರು ಕಾಲಕಾಲಕ್ಕೆ ಹೊರಡಿಸಬಹುದಾದ ನಿರ್ದೇಶನಗಳನ್ನು/ಆದೇಶಗಳನ್ನು/ ಅಧಿಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಮತದಾರರ ಪಟ್ಟಿಯನ್ನು ತಯಾರಿಸತಕ್ಕದ್ದು.

ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ, ನಿಯಮ 13ಸಿ(2), 13ಡಿ(4) ಮತ್ತು (5) ರಂತೆ ಕ್ರಮ ಕೈಗೊಂಡ ನಂತರ ನಿಯಮ 13ಎ ರಂತೆ ಗುರುತಿನ ಚೀಟಿಯನ್ನು ಸಹ ನೀಡಿದ ವಿವರಗಳನ್ನು ತಯಾರಿಸಿ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಗಳು ಸುತ್ತೋಲೆಗೆ ಲಗತ್ತಿಸಿರುವ ಚೆಕ್‌ಲಿಸ್ಟ್ ನಮೂನೆ ಮಾಹಿತಿಗಳನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಪರಿಶೀಲಿಸಿ, ದೃಢೀಕರಿಸಿ ಅವುಗಳ ಪ್ರತಿಗಳನ್ನು ನಿಗದಿತ ಸಮಯಕ್ಕೆ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು. ಅದೇ ರೀತಿಯಲ್ಲಿ ಚುನಾವಣಾಧಿಕಾರಿಯು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಘಗಳ/ಸಹಕಾರಿಗಳ ಮತದಾರರ ಪಟ್ಟಿಯನ್ನು ಹಾಗೂ ಮತದಾರರ ಪಟ್ಟಿಯಂತೆ ಮತದಾರರಿಗೆ ನೀಡಿರುವ ಗುರುತಿನ ಚೀಟಿಗಳ ವಿವರಗಳನ್ನು (ಪ್ರತಿ ವರ್ಷದ ಏಪ್ರಿಲ್-1 ರಿಂದ ಮುಂದಿನ ವರ್ಷದ ಮಾರ್ಚ್-31 ರವರೆಗೆ) ಗಣಕೀಕರಿಸಿ, ದೃಢೀಕರಿಸಿದ ಸಾಫ್ಟ್‌ಕಾಪಿ ಮತ್ತು ಹಾರ್ಡ್‌ಕಾಪಿಗಳನ್ನು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಪ್ಪದೇ ಸಲ್ಲಿಸತಕ್ಕದ್ದು. ಈ ಗಣಕೀಕರಿಸಿದ ಮತ್ತು ದೃಢೀಕರಿಸಿದ ಮಾಹಿತಿಯನ್ನು ಪ್ರಾಧಿಕಾರದಿಂದ ಮೇಲ್ವಿಚಾರಣೆಗೆ ನಿಯೋಜಿಸಲ್ಪಟ್ಟ ಅಧಿಕಾರಿಗಳು ಸಹಕಾರ ಸಂಘಗಳಿಗೆ/ಸಹಕಾರಿಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅನುಬಂಧ -2ರ ಚೆಕ್‌ಲಿಸ್ಟ್‌ಗೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ಪರಿಶೀಲನೆಗೆ ತಪ್ಪದೇ ಹಾಜರು ಪಡಿಸತಕ್ಕದ್ದು.

ಮೇಲಿನ ಕಂಡಿಕೆಗಳಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಪ್ರತಿ ವರ್ಷದಲ್ಲಿ ಚುನಾವಣೆಗೆ ಬಾಕಿ ಇರುವ ಎಲ್ಲಾ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಗಳನ್ನು ಚುನಾವಣಾ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಗಳು ನಿಯಮಾನುಸಾರ, ಪಾರದರ್ಶಕವಾಗಿ ಮತ್ತು ನಿಷ್ಪಕ್ಷಪಾತವಾಗಿ ನಡೆಸುವ ಉದ್ದೇಶದಿಂದ ಸರಿಯಾದ ಮತದಾರರ ಪಟ್ಟಿಯನ್ನು ತಯಾರಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

ತಮ್ಮ ವಿಶ್ವಾಸಿ,

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು

ಇವರಿಗೆ:-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಹಕಾರ ಇಲಾಖಾ ಸಚಿವಾಲಯ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01.
2. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1 ಅಲಿ ಆಸ್ಕರ್ ರಸ್ತೆ, ಬೆಂಗಳೂರು- 560052
3. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು
4. ಪ್ರಾದೇಶಿಕ ಆಯುಕ್ತರು ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ಪ್ರಾಂತ
5. ಸಹಕಾರ ಸಂಘಗಳ ಅಪರ ನಿಬಂಧಕರು, (ಪತ್ತು), (ಕೈಗಾರಿಕೆ ಮತ್ತು ಹೈನುಗಾರಿಕೆ), (ವಸತಿ ಮತ್ತು ಇತರೆ), (ಬಳಕೆ ಮತ್ತು ಮಾರಾಟ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1 ಅಲಿ ಆಸ್ಕರ್ ರಸ್ತೆ, ಬೆಂಗಳೂರು- 560052
6. ಸಹಕಾರ ಸಂಘಗಳ ಜಂಟಿ ನಿಬಂಧಕರು(ಆಡಳಿತ ಮತ್ತು ಅಭಿವೃದ್ಧಿ), (ಪಟ್ಟಣ ಬ್ಯಾಂಕುಗಳು), (ಐಸಿಡಿಪಿ), (ಕಾನೂನುಕೋಶ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1 ಅಲಿ ಆಸ್ಕರ್ ರಸ್ತೆ, ಬೆಂಗಳೂರು- 560052
7. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ
8. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ
9. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ.
10. ಎಲ್ಲಾ ಉಪ ವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ
11. ಎಲ್ಲಾ ವಿಭಾಗದ ಕಾಡಾ ಕಛೇರಿಗಳ ಆಡಳಿತಗಾರರುಗಳಿಗೆ
12. ರಾಜ್ಯದ ಎಲ್ಲಾ ಮಹಾಮಂಡಳಗಳ ವ್ಯವಸ್ಥಾಪಕ ನಿರ್ದೇಶಕರಿಗೆ
13. ಎಲ್ಲಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರುಗಳಿಗೆ
14. ಎಲ್ಲಾ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರುಗಳಿಗೆ
15. ಎಲ್ಲಾ ಜಿಲ್ಲಾ ಸಹಕಾರ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರುಗಳಿಗೆ
16. ರಕ್ಷಾ ಕಡತ/ಕಛೇರಿ ಪ್ರತಿ

## ಅನುಬಂಧ-I

ಸಂಖ್ಯೆ:ಸಚುಪ್ರಾ/ಮ.ಪಟ್ಟಿ/02/2016 ದಿನಾಂಕ: 14.12.2015

ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ನಿಯಮಗಳು 2004ರಂತೆ ಅನ್ವಯವಾಗಬಹುದಾದ ವಿವಿಧ ಪ್ರಕರಣಗಳ ಮತ್ತು ನಿಯಮಗಳ ವಿವರಗಳು.

### ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959

I. ಪ್ರಕರಣ 16: ಸದಸ್ಯರಾಗಬಹುದಾದ ವ್ಯಕ್ತಿಗಳು
II. ಪ್ರಕರಣ 17: ಸದಸ್ಯತ್ವಕ್ಕೆ ಅನರ್ಹತೆ
III. ಪ್ರಕರಣ 18: ನಾಮಮಾತ್ರದ ಅಥವಾ ಸಹ ಸದಸ್ಯರು
IV. ಪ್ರಕರಣ 18ಎ: ಸದಸ್ಯತ್ವದ ಅಂತ್ಯವಾಗುವಿಕೆ
V. ಪ್ರಕರಣ 18ಬಿ: ನಿರ್ದೇಶಕತ್ವದ ಸಮಾಪ್ತಿ
VI. ಪ್ರಕರಣ 19: ಬಾಕಿ ಸಂದಾಯ ಮಾಡುವವರೆಗೆ ಸದಸ್ಯನು ಹಕ್ಕುಗಳನ್ನು ಚಲಾಯಿಸತಕ್ಕದ್ದಲ್ಲ.
VII. ಪ್ರಕರಣ 20: ಸದಸ್ಯರ ಮತಗಳು
VIII. ಪ್ರಕರಣ 23: ಷೇರುಗಳ ಅಥವಾ ಹಿತಾಸಕ್ತಿಗಳ ವರ್ಗಾವಣೆಗಳ ಮೇಲೆ ನಿರ್ಬಂಧಗಳು
IX. ಪ್ರಕರಣ 24: ಸದಸ್ಯನ ಮರಣಾನಂತರ ಹಿತಾಸಕ್ತಿಯ ವರ್ಗಾವಣೆ
X. ಪ್ರಕರಣ 28ಎ(5): ಸಹಕಾರ ಸಂಘದ ವ್ಯವಸ್ಥಾಪನೆಯು ಮಂಡಲಿಯಲ್ಲಿ ನಿಹಿತವಾಗಿರುವುದು
XI. ಪ್ರಕರಣ 28ಬಿ(2): ಮಂಡಲಿಯು ಚುನಾವಣೆಗೆ ವ್ಯವಸ್ಥೆ ಮಾಡುವುದು
XII. ಪ್ರಕರಣ 29ಸಿ: ಮಂಡಲಿಯ ಸದಸ್ಯತ್ವಕ್ಕೆ ಅನರ್ಹತೆಗಳು
XIII. ಪ್ರಕರಣ 98ಡಿ: ಠೇವಣಿದಾರರಿಗೆ ಸದಸ್ಯತ್ವನ್ನು ಖಚಿತಪಡಿಸುವುದು
XIV. ಪ್ರಕರಣ 98ಎನ್: ಸಹಕಾರ ಪತ್ತಿನ ವ್ಯವಸ್ಥೆಯ ಸಂಘದ ಮಂಡಲಿಯ ಸದಸ್ಯರ ಅನರ್ಹತೆ
XV. ಪ್ರಕರಣ 98ಒ: ಹೊಸ ಮಂಡಲಿಯ ಚುನಾವಣೆಗೆ 20ನೇ ಪ್ರಕರಣ ಮತ್ತು 29ಸಿ ಪ್ರಕರಣದ ಅನ್ವಯ

### ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960

XVI. ನಿಯಮ 8: ಸಂಘದ ಸಾಮಾನ್ಯ ಸಭೆಗೆ ಮೊದಲು ಸದಸ್ಯರನ್ನು ಸೇರಿಸಿಕೊಳ್ಳುವುದು.
XVII. ನಿಯಮ 8ಎ: ಷೇರು ಮೌಲ್ಯವನ್ನು ವರ್ಧಿಸಲು ನಿಷೇದ
XVIII. ನಿಯಮ 11: ನಾಮಿನಿಗಳ ನೇಮಕ
XIX. ನಿಯಮ 12: ಸದಸ್ಯರ ಷೇರಿನ ಮೌಲ್ಯ
XX. ನಿಯಮ 13ಸಿ: ಮಂಡಲಿಗೆ ಸಾರ್ವತ್ರಿಕ ಚುನಾವಣೆ ನಡೆಸುವಿಕೆ
XXI. ನಿಯಮ 13ಡಿ: ಮತದಾರರ ಪಟ್ಟಿ ತಯಾರಿಕೆ ಮತ್ತು ಚುನಾವಣಾ ಪ್ರಕ್ರಿಯೆ
XXII. ನಿಯಮ 53(5): ಸಂಘಗಳು ಒದಗಿಸಬೇಕಾದ ವಿವರ ಪತ್ರಗಳು ಮತ್ತು ವಿವರ ಪಟ್ಟಿಕೆಗಳು

### ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997

XXIII. ಪ್ರಕರಣ 20: ಸದಸ್ಯನನ್ನಾಗಿ ಸೇರಿಸಿಕೊಳ್ಳಬಹುದಾದ ಮತ್ತು ಮುಂದುವರೆಸಬಹುದಾದ ವ್ಯಕ್ತಿಗಳು
XXIV. ಪ್ರಕರಣ 21ಎ: ನಾಮಮಾತ್ರ ಸದಸ್ಯರು

XXV. ಪ್ರಕರಣ 25: ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಇರುವ ಅನರ್ಹತೆ

XXVI. ಠಿಪ್ರಕರಣ 55: ಚುನಾಯಿತನಾಗಲು ಅಥವಾ ನಿರ್ದೇಶಕನಾಗಿ ಮುಂದುವರೆಯಲು ಅನರ್ಹತೆ

XXVII. ಪ್ರಕರಣ 63: ಲೆಕ್ಕಪತ್ರಗಳು

**ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004**

XXVIII. ನಿಯಮ 5ಬಿ: ಮತದಾರರ ಪಟ್ಟಿ ತಯಾರಿಕೆ ಮತ್ತು ಚುನಾವಣಾ ಪ್ರಕ್ರಿಯೆ.

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು

ಸಂಖ್ಯೆ: ಸಚುಪ್ರಾ/ಮ.ಪಟ್ಟಿ/02/2016 ಅನುಬಂಧ-2 ದಿನಾಂಕ: 14.12.2015

# ಸಹಕಾರ ಚುನಾವಣಾ ಪ್ರಾಧಿಕಾರ

## 3ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. 'ಎ' ಬ್ಲಾಕ್, ಶಾಂತಿನಗರ, ಬೆಂಗಳೂರು

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 16, 17, 18, 18ಎ, 18ಬಿ, 19, 20, 23, 24 ಮತ್ತು ನಿಯಮ 13ಎ, 13ಸಿ, 13ಡಿ, 53(5) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 20, 21ಎ, 25, 55, 63 ಮತ್ತು ನಿಯಮ 5ಬಿ ರೀತ್ಯಾ ಸಹಕಾರ ಸಂಘಗಳ/ಸಹಕಾರಿಗಳ ಮತದಾರರ ಪಟ್ಟಿ ತಯಾರಿಸುವ ಸಂಬಂಧ ಸಲ್ಲಿಸಬೇಕಾದ ಪರಿಶೀಲನಾ ಪಟ್ಟಿ

ಸಂಘದ ಹೆಸರು:______________________________

ಮುಖ್ಯಕಾರ್ಯನಿರ್ವಹಣಾಧಿಕಾರಿ ಹೆಸರು:____________________ ಮೊಬೈಲ್ ಸಂಖ್ಯೆ:____________

ಸಂಘದ ಇ-ಮೇಲ್ ಐಡಿ______________________________

ತಾಲ್ಲೂಕು:____________ ಜಿಲ್ಲೆ:____________ ಕಾರ್ಯವ್ಯಾಪ್ತಿ____________

ಒಟ್ಟು ಸದಸ್ಯರ ಸಂಖ್ಯೆ:__________ ಸಾಮಾನ್ಯ ಸದಸ್ಯರ ಸಂಖ್ಯೆ:__________ ಸಹ ಸದಸ್ಯರ ಸಂಖ್ಯೆ:__________

| ಕ್ರಮ ಸಂಖ್ಯೆ | ವಿವರಗಳು | ಷರಾ |
|---|---|---|
| 1. | ಸಂಘವು ಸದಸ್ಯತ್ವದ ಷೇರು ಪುಸ್ತಕವನ್ನು ನಿರ್ವಹಿಸಿದೆಯೇ? | |
| 2. | ಷೇರು ಪುಸ್ತಕವನ್ನು ಎಂದಿನಿಂದ ನಿರ್ವಹಿಸಿದೆ? | |
| 3. | ಷೇರು ಪುಸ್ತಕದಲ್ಲಿ ನಿರ್ವಹಿಸಬೇಕಾದ ಈ ಕೆಳಕಂಡ ಮಾಹಿತಿಯು ಲಭ್ಯವಿದೆಯೆ? | |
| | ಸದಸ್ಯನ ಪೂರ್ಣ ಹೆಸರು | |
| | ಸದಸ್ಯತ್ವ ಸಂಖ್ಯೆ | |
| | ಖಾಯಂ ವಿಳಾಸ | |
| | ತಾತ್ಕಾಲಿಕ ವಿಳಾಸ | |
| | ಹುಟ್ಟಿದ ದಿನಾಂಕ | |
| | ಭಾವಚಿತ್ರ | |
| | ನಾಮಿನಿ ಹೆಸರು | |
| | ಸದಸ್ಯನ ಸಹಿ | |
| 4. | ಸದಸ್ಯರಿಗೆ ಇತ್ತೀಚಿನ ಭಾವಚಿತ್ರ ಹೊಂದಿರುವ ಗುರುತಿನ ಚೀಟಿ ನೀಡಲಾಗಿದೆಯೆ? ಹೌದಾದಲ್ಲಿ ಎಷ್ಟು ಸದಸ್ಯರಿಗೆ ಗುರುತಿನ ಚೀಟಿ ನೀಡಲಾಗಿದೆ? | |
| 5. | ಸಂಘದ ಕಾರ್ಯಕ್ಷೇತ್ರ ಬಿಟ್ಟು ಹೋದ/ವಾಸವಿಲ್ಲದ ಸದಸ್ಯರನ್ನು ಸದಸ್ಯತ್ವದಿಂದ ಕೈಬಿಡಲಾಗಿದೆಯೇ? | |
| 6. | ನಿಧನ ಹೊಂದಿದ ಸದಸ್ಯನ ನಾಮಿನಿಗೆ ಸದಸ್ಯತ್ವ ವರ್ಗಾಯಿಸಿದೆಯೇ? | |

| ಕ್ರಮ ಸಂಖ್ಯೆ | ವಿವರಗಳು | ಷರಾ |
|---|---|---|
| 7. | ನಿಧನ ಹೊಂದಿ, ನಾಮಿನಿಗೆ ವರ್ಗಾಯಿಸದ ಸದಸ್ಯರ ಹೆಸರನ್ನು ಷೇರು ಪುಸ್ತಕದಿಂದ ಕೈಬಿಡಲಾಗಿದೆಯೇ? | |
| 8. | ಯಾವುದೇ ಕಾರಣದಿಂದ ಸದಸ್ಯತ್ವ ರದ್ದಾದ ಸದಸ್ಯರ ಹೆಸರನ್ನು ಕೈಬಿಡಲಾಗಿದೆಯೇ? | |
| 9. | ಸಹ ಸದಸ್ಯರನ್ನು ಖಾಯಂ ಸದಸ್ಯರನ್ನಾಗಿ ಪರಿವರ್ತಿಸಲಾಗಿದೆಯೇ? | |
| 10. | ಪ್ರತಿ ವರ್ಷ ಸದಸ್ಯರ ಷೇರು ಪುಸ್ತಕವನ್ನು ಪರಿಶೀಲಿಸಿ ಕ್ರಮವಿಡಲಾಗಿದೆಯೇ? | |
| 11. | ವಾರ್ಷಿಕ ಮಹಾಸಭೆಯ ಹಾಜರಾತಿ ಪುಸ್ತಕವನ್ನು ನಿರ್ವಹಿಸಿದೆಯೇ? | |
| 12. | ಕಳೆದ 5 ವರ್ಷಗಳಲ್ಲಿ ಕನಿಷ್ಠ 3 ವರ್ಷಗಳು ವಾರ್ಷಿಕ ಮಹಾಸಭೆಗೆ ಹಾಜರಾದ ಸದಸ್ಯರ ಹಾಜರಾತಿ ಮುಸ್ತಕವನ್ನು ನಿರ್ವಹಿಸಿದೆಯೇ? | |
| 13. | ಸದಸ್ಯರು ಸಂಘದ ಉಪ ವಿಧಿಯ ಉದ್ದೇಶಗಳಂತೆ ಮೂರು ನಿರಂತರ ಸಹಕಾರಿ ವರ್ಷಗಳಲ್ಲಿ ಕನಿಷ್ಠ ಸೇವೆ ಅಥವಾ ಸೌಲಭ್ಯಗಳನ್ನು ಪಡೆದಿರುವ ಮಾಹಿತಿಯನ್ನು ಪರಿಶೀಲಿಸಲು ಪ್ರತ್ಯೇಕ ರಿಜಿಸ್ಟರ್ ನಿರ್ವಹಿಸಿದೆಯೇ? | |
| 14. | ಮೇಲ್ಕಂಡ ಮಾಹಿತಿಗಳನ್ನು ಪರಿಶೀಲಿಸಿ ಇಲಾಖಾಧಿಕಾರಿಗಳು ದೃಢೀಕರಿಸಿರುತ್ತಾರೆಯೇ? | |
| 15. | ಸದಸ್ಯರ ಗಣಕೀಕೃತ(ವರ್ಡ್/ಎಕ್ಸಲ್) ಪಟ್ಟಿಯು ಲಭ್ಯವಿದೆಯೇ? | |

ಮೇಲ್ಕಂಡ ಸಂಘದ ವಿವರಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 29ಜಿ(4) ಹಾಗೂ ನಿಯಮ 13ಸಿ(2) ಮತ್ತು 53(5) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಪ್ರಕರಣ 31 ಮತ್ತು 63 ಹಾಗೂ ನಿಯಮ 5ಬಿ ರಂತೆ ನನ್ನ ವಶದಲ್ಲಿರುವ ಸಂಘದ ದಾಖಲಾತಿಗಳಿಂದ ಸರಿಯಾದ ಮಾಹಿತಿ ತಯಾರಿಸಿ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಚುನಾವಣಾಧಿಕಾರಿಗೆ ಸಲ್ಲಿಸಿರುತ್ತೇನೆ ಎಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ:
ಸ್ಥಳ:

ಮುಖ್ಯಕಾರ್ಯನಿರ್ವಹಣಾಧಿಕಾರಿ ಹೆಸರು
ಸಹಿ ಮತ್ತು ಮೊಹರು

ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಶದಲ್ಲಿರುವ ದಾಖಲಾತಿಗಳಿಂದ ಸಲ್ಲಿಸಿರುವ ವಿವರಗಳನ್ನು ಪರಿಶೀಲಿಸಿರುತ್ತೇನೆ ಮತ್ತು ಸದರಿ ವಿವರಗಳು ಸಂಘದ ದಾಖಲಾತಿಗಳ ಪ್ರಕಾರ ಸರಿಯಾಗಿರುತ್ತದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ:
ಸ್ಥಳ:

ಪರಿಶೀಲನಾಧಿಕಾರಿ ಹೆಸರು
ಪದನಾಮ ಮತ್ತು ಮೊಹರು